# ಭಗವದ್ಗೀತೆಯ ಕೃಪೆ

ಹಿಂದೀಮೂಲ: **ಸುದರ್ಶನ ಸಿಂಹ ಚಕ್ರ** ಅನುವಾದ: **ಮಾತಾ ತ್ಯಾಗಮಯೀ**

ಶ್ರೀಕೃಷ್ಣ ಪರಮಾತ್ಮನ ದಿವ್ಯಬೋಧನೆಗಳ ಸಂಕಲನವಾದ, ಭಾರತೀಯರ ಆಧ್ಯಾತ್ಮಿಕ, ನೈತಿಕ ಹಾಗೂ ಧಾರ್ಮಿಕ ಗ್ರಂಥವಾದ ಶ್ರೀಮದ್ಭಗವದ್ಗೀತೆಯು ಅನಾದಿ ಕಾಲದಿಂದಲೂ ಹಲವರ ಮನೆ-ಮನಗಳನ್ನು ಬೆಳಗಿದೆ. ಭಕ್ತರ ಜೀವನದಲ್ಲಿ ಹಲವು ಬಗೆಯ ಪರಿವರ್ತನೆಗಳನ್ನು ಮಾಡಬಲ್ಲ ಈ ಗ್ರಂಥವನ್ನು ಕುರಿತು 'ಕಲ್ಯಾಣ ಕಲ್ಪತರು' ಮಾಸಪತ್ರಿಕೆಯಲ್ಲಿ ಪ್ರಕಟವಾದ ಲೇಖನದ ಅನುವಾದವಿದು. ಅನುವಾದಕರು ಚಳ್ಳಕೆರೆ ಶ್ರೀಶಾರದಾಶ್ರಮದ ಮುಖ್ಯಸ್ಥರಾಗಿದ್ದು, ಹಲವು ಉತ್ತಮ ಗ್ರಂಥಗಳನ್ನು ರಚಿಸಿದ್ದಾರೆ.



**ಸ್ವಾಧ್ಯಾಯಾದಿಷ್ಟದೇವತಾ ಸಂಪ್ರಯೋಗಃ**

*(ಪಾತಂಜಲ ಯೋಗದರ್ಶನ, ೨.೪೪)*

ಸ್ವಾಧ್ಯಾಯದಿಂದ ಇಷ್ಟದೇವತೆಯ ಸಾಕ್ಷಾತ್ಕಾರವಾಗುತ್ತದೆ. ಸ್ವಾಧ್ಯಾಯ ಎಂದರೆ ಮಂತ್ರಜಪ. ಸ್ವಾಧ್ಯಾಯ ಎಂದರೆ ಸ್ವ+ಅಧ್ಯಾಯ, ತನ್ನ+ಅಧ್ಯಯನ, ತನ್ನ ಗ್ರಂಥದ ಅಧ್ಯಯನ, ತನ್ನ ಜೀವನದಲ್ಲಿ ತನ್ನ ಜೀವನದ ಒಂದು ಅಂಗವೇ ಆದ ಗ್ರಂಥದ ಅಧ್ಯಯನ.

ಒಂದು ಗ್ರಂಥವನ್ನು ಅಧ್ಯಯನ ಮಾಡುತ್ತ ಆತ್ಮಶಕ್ತಿ ಜಾಗೃತವಾಗುತ್ತದೆ. ಸ್ನಾನ ಮಾಡುವುದರಿಂದ ಶರೀರ ಸ್ವಚ್ಛವಾಗಿ ಉತ್ಸಾಹ ವರ್ಧನೆಯಾಗುತ್ತದೆ. ಹಾಗೆ ಸದ್ಗ್ರಂಥಗಳ ಅಧ್ಯಯನವು ಮಾನಸಿಕ ಸ್ನಾನ. ಅದರಿಂದ ಅಂತಃಕರಣ ಶುದ್ಧಿಯಾಗುತ್ತದೆ, ಸಾಧನೆಯನ್ನು ಮಾಡಲು ಮನಶ್ಶಕ್ತಿ ವರ್ಧಿಸುತ್ತದೆ, ಪ್ರಚೋದನೆ ಸಿಗುತ್ತದೆ.

ನೀವು ಭಗವದ್ಗೀತೆ, ಭಾಗವತ ಅಥವಾ ಇನ್ನಾವುದೇ ಗ್ರಂಥದ ನಿಮಗೆ ಅತ್ಯಂತ ಸಾಮಾನ್ಯವೆನಿಸುವ ಯಾವುದೇ ಒಂದು ಶ್ಲೋಕವನ್ನು ಬಾಯಿಪಾಠ ಮಾಡಿರಿ. ಅದನ್ನು ಮನಸ್ಸಿನಲ್ಲಿ ಮತ್ತೆ ಮತ್ತೆ ಹೇಳಿಕೊಳ್ಳುತ್ತಿರಿ. ನಾಲ್ಕು ದಿನ ಅದನ್ನೇ ಮುಂದುವರೆಸಿರಿ. ಆಗ ನಿಮಗೆ ಅತ್ಯಂತ ಆಶ್ಚರ್ಯವಾಗುವಂತೆ ಅದರ ವಿಶೇಷ ಅರ್ಥ ಮನೋಗೋಚರವಾಗುತ್ತದೆ. ಆ ಶ್ಲೋಕವನ್ನು ಮತ್ತೆ ಮತ್ತೆ ಹೇಳಿದ್ದರಿಂದ ಅದರ ರಹಸ್ಯ ನಿಮ್ಮ ಮುಂದೆ ತೆರೆದುಕೊಂಡಿತು. ಅದೇ ರೀತಿ ಅಂತಃಕರಣದಲ್ಲಿರುವ ಭಗವತ್ ತತ್ತ್ವವನ್ನು ಮುಚ್ಚಿದ ಪರದೆಯೂ ಅನವರತ ಸ್ವಾಧ್ಯಾಯದಿಂದ ಹರಿದು ಹೋಗಿ ಭಗವಂತ ಗೋಚರಿಸುತ್ತಾನೆ, ದರ್ಶನವೀಯುತ್ತಾನೆ.

ಹಾಗೆಂದು ಸ್ವಾಧ್ಯಾಯ ಸುಲಭವಲ್ಲ. ಸ್ವಾಧ್ಯಾಯದ ಸಂಕಲ್ಪ ಕೂಡ ಅದ್ಭುತ ಕೆಲಸವನ್ನು ಮಾಡುತ್ತದೆ ಎಂಬುದನ್ನು ನಾನು ಕಣ್ಣಾರೆ ಕಂಡಿದ್ದೇನೆ.

ವಾರಣಾಸಿ ಜಿಲ್ಲೆಯಲ್ಲಿರುವ ಒಂದು ಹಳ್ಳಿ ಮಹುಅರ್. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ನನ್ನೊಡನೆ ಆ ಹಳ್ಳಿಯ ಒಬ್ಬ ಕ್ಷತ್ರಿಯ ಯುವಕ ಸತ್ಯಾಗ್ರಹ ಚಳುವಳಿಯಲ್ಲಿ ಭಾಗವಹಿಸಿದ್ದನು. ಅವನ ಹೆಸರು ಜಯನಾಥ ಸಿಂಹ. ಎಲ್ಲರೂ ಅವನನ್ನು ಜೈನೂ ಸಿಂಹ ಎಂದು ಕರೆಯುತ್ತಿದ್ದರು. ಅವನ ಅಣ್ಣ ದೇವನಾಥ ಸಿಂಹನನ್ನು ನಾನು ೧೯೩೮ರಲ್ಲಿ ಭೇಟಿಯಾಗಿದ್ದೆ. ಅವನು ಸತ್ಯಾಗ್ರಹದಲ್ಲಿ ಭಾಗಿಯಾಗಿರಲಿಲ್ಲ.

ನಾನು ವಾರಣಾಸಿಯನ್ನು ಬಿಟ್ಟಿದ್ದು ೧೯೩೬ರಲ್ಲಿ. ೧೯೩೭ರಿಂದ ನಾನು ಮೀರತ್‌ನಿಂದ ಪ್ರಕಟಿತವಾಗುವ '**ಸಂಕೀರ್ತನ**' ಎಂಬ ಮಾಸಪತ್ರಿಕೆಯ ಸಂಪಾದಕನಾಗಿದ್ದೆನು. ಆಗ ನಾನು ಕೆಲವು ದಿನಗಳಿಗಾಗಿ ವಾರಣಾಸಿಗೆ ಬಂದಿದ್ದೆನು.

ಒಂದು ದಿನ ದೇವನಾಥಸಿಂಹ ನನ್ನನ್ನು ಭೇಟಿಯಾಗಲು ಬಂದಿದ್ದನು. ಅವನು, ''ನನಗೆ ಭಗವದ್ಗೀತೆಯನ್ನು ಓದಬೇಕೆಂಬ ಆಸೆ. ಆದರೆ ಈ ವಯಸ್ಸಿನಲ್ಲಿ ಹಳ್ಳಿಯಲ್ಲಿ ಯಾರ ಹತ್ತಿರವಾದರೂ ಅಕ್ಷರವನ್ನು ಹೇಳಿಸಿಕೊಂಡು ಕಲಿಯಲು ನಾಚಿಕೆ. ತಾವು ಏನಾದರೂ ಉಪಾಯವನ್ನು ಸೂಚಿಸಿ'' ಎಂದನು.

ಅವನು ಜಮೀನ್ದಾರನಾಗಿದ್ದನು. ಆಗರ್ಭ ಶ್ರೀಮಂತನಾಗಿದ್ದನು. ಆದರೂ ಅಂದಿನ ದಿನಗಳಲ್ಲಿ ಅವರೆಲ್ಲ ಓದುಬರಹದ

ಕಡೆಗೆ ಗಮನ ಕೊಟ್ಟವರೇ ಅಲ್ಲ. ತಮ್ಮ ಮಕ್ಕಳೂ ಓದುಬರಹ ಕಲಿತು ಏನಾಗಬೇಕಾಗಿದೆ? ಯಾವ ಉದ್ಯೋಗವನ್ನು ಮಾಡಬೇಕಾಗಿದೆ? ಎನ್ನುತ್ತಿದ್ದರು. ಅವರ ತಮ್ಮ ಜಯನಾಥ ಸಿಂಹನೂ ಕಾಂಗ್ರೆಸ್ ಸೇರಿದ ಮೇಲೆಯೇ ಅಕ್ಷರಾಭ್ಯಾಸವನ್ನು ಮಾಡಿ ಹಿಂದಿ ಪುಸ್ತಕಗಳನ್ನು ಓದಲಾರಂಬಿಸಿದ್ದು.

ವಯಸ್ಸಾದ ಮೇಲೆ ಅಕ್ಷರಾಭ್ಯಾಸವನ್ನು ಮಾಡಲು ನಾಚಿಕೆ ಪಡಬೇಕಿಲ್ಲ. ಆದರೆ ೩೫ ವರ್ಷದ ದೇವನಾಥರಿಗೆ ಅದನ್ನು ನಾನು ಮನವರಿಕೆ ಮಾಡುವುದು ಹೇಗೆ? ಹಾಗೆಂದು ವರ್ಣಮಾಲೆಯ ಪರಿಚಯವೇ ಇಲ್ಲದವನಿಗೆ ಗೀತೆಯ ಶ್ಲೋಕವನ್ನು ಕಲಿಸಿಕೊಡುವುದು ಹೇಗೆ? ಹಾಗೆ ನೋಡಿದರೆ ನಂದಬಾಬಾ ಕೂಡ ತನ್ನ ಕನ್ಯೆಯರಿಗೆ ಓದುಬರಹ ಕಲಿಸಿರಲಿಲ್ಲ, ಬಾಲ್ಯದಿಂದಲೇ ಹಸುಗಳನ್ನು ಕಾಯಲು ಕಳಿಸಿಬಿಟ್ಟಿದ್ದನು. ಆದರೆ ಈ ಅನಕ್ಷರಸ್ಥ ಗೋಪಾಲ (ಶ್ರೀಕೃಷ್ಣ) ಯಾರನ್ನು ಬೇಕಿದ್ದರೂ ಮಹಾಪಂಡಿತನನ್ನಾಗಿ ಮಾಡಬಲ್ಲ ಎಂದು ನನಗೆ ನಂಬಿಕೆಯಿತ್ತು.

ನಾನು ದೇವನಾಥನಿಗೆ ಹೇಳಿದೆ, ''ಭಗವದ್ಗೀತೆ ಭಗವಂತನ ವಾಣಿ. ಅದು ಅವನ ಸಾಕ್ಷಾತ್‌ಸ್ವರೂಪ. ಗೀತೆಯನ್ನು ಸ್ಪರ್ಶಿಸಿದರೂ ಗೀತೆಯನ್ನು ಪಾರಾಯಣ ಮಾಡಿದಂತೆಯೇ. ನೀವು ಪ್ರತಿದಿನ ಗೀತೆಗೆ ಕೈ ಮುಗಿದು, ಅದನ್ನು ಎತ್ತಿಕೊಂಡು ಅಲ್ಲಿರುವ ಶ್ಲೋಕಗಳ ಮೇಲೆ ಬೆರಳುಗಳನ್ನು ಆಡಿಸಿರಿ.''

ನನ್ನ ಮಾತಿನಲ್ಲಿ ಅವನಿಗೆ ನೂರಕ್ಕೆ ನೂರು ನಂಬಿಕೆ ಬಂದಿತು. ಅವರ ಹತ್ತಿರ ಒಂದು ದೊಡ್ಡ ಅಕ್ಷರಗಳಲ್ಲಿರುವ ಗೀತೆಯ ಪುಸ್ತಕ ಇತ್ತು. ಪ್ರತಿದಿನ ಅವನು ಅದರ ಮೊದಲ ಶ್ಲೋಕದಿಂದ ಕೊನೆಯ ಶ್ಲೋಕದವರೆಗೆ ಬೆರಳುಗಳನ್ನು ಆಡಿಸುತ್ತಿದ್ದನು.

ಈ ಘಟನೆಯಾಗಿ ಒಂದು ವರ್ಷಕ್ಕೊ, ಎರಡು ವರ್ಷಕ್ಕೊ ನಾನು ಮತ್ತೆ ಮೀರತ್ತಿನಿಂದ ವಾರಣಾಸಿಗೆ ಹೋದೆನು. ದೇವನಾಥನಿಗೆ ಯಾರ ಮೂಲಕವೋ ನಾನು ಬಂದಿರುವ ವಿಷಯ ಗೊತ್ತಾಯಿತು. ಅವನು ನನ್ನನ್ನು ಭೇಟಿಯಾಗಲು ಬಂದನು. ಅವನು ಹೇಳಿದನು, ''ನಾನು ಗೀತೆಯ ಶ್ಲೋಕಗಳ ಮೇಲೆ ಬೆರಳನ್ನು ಆಡಿಸುವಾಗ ನನ್ನ ಬಾಯಿಯಿಂದ ಏನೇನೋ ಶಬ್ದಗಳು ಬರುತ್ತವೆ. ನಾನು ಏನು ಹೇಳುತ್ತೇನೆ ನನಗೇ ಅರ್ಥವಾಗುತ್ತಿಲ್ಲ.'' ನಾನು ಅವನೊಬ್ಬನೇ ಇರುವಾಗ ಅದನ್ನು ಓದಲು ಹೇಳಿದೆ. ಅವನು ಗೀತೆಗೆ ಕೈಮುಗಿದು, ಯಾವ ಶ್ಲೋಕದ ಮೇಲೆ ಬೆರಳನ್ನು ಇಟ್ಟನೋ ಆ ಶ್ಲೋಕ ಅವನ ಬಾಯಿಯಿಂದ ಸರಾಗವಾಗಿ ಬರತೊಡಗಿತು. ಅವನ ಉಚ್ಚಾರ ಸ್ಪಷ್ಟವಾಗಿತ್ತು. ಯಾವ ಶ್ಲೋಕದ ಮೇಲೆ ತಾನು ಕೈಯಿಟ್ಟರೂ ಅದೇ ಶ್ಲೋಕ ಅವನ ಬಾಯಲ್ಲಿ. ನನ್ನ ಆಶ್ಚರ್ಯಕ್ಕೆ ಪಾರವೇ ಇರಲಿಲ್ಲ. ನಾನು ಅವನಿಗೆ ಅವನು ಪ್ರತಿದಿನ ಪೂಜಿಸಿ ಪ್ರಣಾಮ ಮಾಡುತ್ತಿರುವ ಗೀತೆಯನ್ನು ಬಿಟ್ಟು ಬೇರೆ ಗೀತೆಯ ಪುಸ್ತಕವನ್ನು ಕೊಡಲಿಲ್ಲ. ಅವನನ್ನು ಪರೀಕ್ಷಿಸುವುದು ನನ್ನ ಉದ್ದೇಶವಾಗಿರಲಿಲ್ಲ. ಆದರೆ ಅವನು ಆ ಗ್ರಂಥದ ಯಾವ ಪುಟವನ್ನು ತೆಗೆದು, ಯಾವ ಶ್ಲೋಕದ ಮೇಲೆ ಕೈಯಿಟ್ಟರೂ ಅದನ್ನು ಸರಿಯಾಗಿ ಹೇಳಿದನು.

ನಾನು ಅವನಿಗೆ, ''ನೀವು ಸರಿಯಾದ ಗೀತೆಯ ಶ್ಲೋಕಗಳನ್ನೇ ಹೇಳುತ್ತಿರುವಿರಿ'' ಎಂದು ಹೇಳಿದಾಗ ಅವನು ಭಾವವಿಹ್ವಲನಾದನು. ''ನನ್ನಂತಹ ಅಲ್ಪನ ಮೇಲೆ ಭಗವಂತನ ಇಂತಹ ವಿಶೇಷ ಕೃಪೆ!'' ಎನ್ನುತ್ತ ಅವನು ಗದ್ಗದಿತನಾದನು.

ಇನ್ನೊಮ್ಮೆ ಅವನು ನನ್ನನ್ನು ಪ್ರಯಾಗ ಹಾಗೂ ಹರಿದ್ವಾರದಲ್ಲಿ ಭೇಟಿಯಾದನು. ಅವನು ಆಗ ಕಾಲ್ನಡಿಗೆಯಲ್ಲಿ ಏಕಾಂಗಿಯಾಗಿ ಇಡೀ ಭಾರತ ತೀರ್ಥಯಾತ್ರೆಯನ್ನು ಮಾಡುತ್ತಿದ್ದನು. ಅವನು ಮೂರು ಸಲ ಸತತವಾಗಿ ಕಾಲ್ನಡಿಗೆಯಲ್ಲಿ ಇಡೀ ಭಾರತದ ತೀರ್ಥಯಾತ್ರೆಯನ್ನು ಮಾಡಿದನು. ನಾಲ್ಕನೆಯ ಸಲ ಯಾತ್ರೆಯನ್ನು ಮಾಡುತ್ತ ದ್ವಾರಕೆ ತಲುಪಿದನು. ಅಲ್ಲಿ ದೇವಸ್ಥಾನದಲ್ಲಿ ದ್ವಾರಕಾಧೀಶನ ದರ್ಶನವನ್ನು ಮಾಡುತ್ತಿರುವಾಗಲೇ ಅವನ ಪ್ರಾಣ ದ್ವಾರಕಾಧೀಶನಲ್ಲಿ ಲಯವಾಯಿತು.

ಇದು ನಾನು ಕೇಳಿದ ಕಥೆಯಲ್ಲ; ಕಣ್ಣಾರೆ ಕಂಡ ಘಟನೆ. ಇದನ್ನೇ ಗ್ರಂಥಕೃಪೆ ಎನ್ನುವುದು. ಗೀತೆ, ಭಾಗವತ, ರಾಮಾಯಣ ಇವೆಲ್ಲ ಮಂತ್ರಗ್ರಂಥಗಳು. ಅವುಗಳಲ್ಲಿನ ಶ್ಲೋಕಶ್ಲೋಕವೂ ಜೀವಂತ ಹಾಗೂ ಮಂತ್ರಗಳು. ಯಾರು ಅವನ್ನು ಶ್ರದ್ಧೆಯಿಂದ ಪಠಿಸುವರೋ ಅವರಿಗೆ ಅವು ಕೃಪೆಗೈಯುವವು.

೧೯೩೭-೩೮ರಲ್ಲಿ ವೃಂದಾವನದಲ್ಲಿ ಒಬ್ಬ ವೃದ್ಧ ಮಹಾತ್ಮರನ್ನು ನಾನು ಭೇಟಿಯಾಗಿದ್ದೆನು. ಅವರ ಹೆಸರು ಶ್ರೀ ಅವಧದಾಸಜೀ. ಶ್ರೀಮದ್ ಭಾಗವತ ಅವರ ಇಷ್ಟಗ್ರಂಥ. ಅವರು ಅದೆಷ್ಟೋ ವರ್ಷಗಳಿಂದ ಶ್ರೀಮದ್ ಭಾಗವತವನ್ನು ಮಾಸಿಕ ಪಾರಾಯಣ ಮಾಡುತ್ತಿದ್ದರು. ವೃದ್ಧಾಪ್ಯದಲ್ಲಿ ಅವರಿಗೆ ದೃಷ್ಟಿ ಕ್ಷೀಣವಾಗಿದ್ದರೂ ಒಂದು ಆಸನದಲ್ಲಿ ಸ್ಥಿರವಾಗಿ ಕುಳಿತುಕೊಂಡು, ಗ್ರಂಥವನ್ನು ಮುಂದೆ ಇಟ್ಟುಕೊಂಡು ಪಾರಾಯಣ ಮಾಡುತ್ತಿದ್ದರು. ಇಡೀ ಗ್ರಂಥ ಅವರಿಗೆ ಕಂಠಸ್ಥವಾಗಿತ್ತು. ಇದು ಗ್ರಂಥಕೃಪೆ.

ತಾತ್ಪರ್ಯವೇನೆಂದರೆ, ನೀವು ನಿಮ್ಮ ಇಷ್ಟದ ಗ್ರಂಥವನ್ನು ನಿಷ್ಠೆಯಿಂದ ನಿತ್ಯಪಠಣ ಮಾಡುವುದಾದಲ್ಲಿ ನಿಮಗೆ ಗ್ರಂಥಕೃಪೆಯಾಗುತ್ತದೆ, ನಿಮ್ಮಲ್ಲಿ ಪ್ರೇಮಾಭಕ್ತಿ, ಊರ್ಜಿತಭಕ್ತಿ ಅವತರಿಸುತ್ತದೆ.

ಶ್ರೀರಾಮಕೃಷ್ಣರು ನಮ್ಮ ಇಷ್ಟ. ಶ್ರೀರಾಮಕೃಷ್ಣರ ಮಂತ್ರ ನಮ್ಮ ಇಷ್ಟಮಂತ್ರ. 'ಶ್ರೀರಾಮಕೃಷ್ಣ ವಚನವೇದ' ನಮ್ಮ ಇಷ್ಟಗ್ರಂಥ. ಇಷ್ಟಮಂತ್ರ ಜಪಿಸುತ್ತ, ಇಷ್ಟಗ್ರಂಥವನ್ನು ನಿತ್ಯಪಾರಾಯಣ ಮಾಡುತ್ತ ಇದ್ದರೆ ಗ್ರಂಥಕೃಪೆಯಾಗುತ್ತದೆ, ಇಷ್ಟದೇವತೆಯ ಸಾಕ್ಷಾತ್ಕಾರವೇ ಆಗುತ್ತದೆ. ಇದಕ್ಕಿಂತ ಸುಲಭಸಾಧನೆ ಇನ್ನೇನು ತಾನೆ ಇದೆ?